ವಾಗುವುದಿಲ್ಲವೆಂದು ನಾನೇ ಅವರಿಗೆ ಅನುಮತಿ ನೀಡಿದ್ದೇನೆ. ಮುಂದಿನ ಅವರ ಬಿಸಿನೆಸ್ ದಿವಸ ಲೀಸ್ಟ್ ಮಾಡಿಸುತ್ತೇನೆ.

ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆ

149 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ನಡೆಯುಲ್ಲಿರುವ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಮೀಸಲಾತಿ ಮಾಡುವಾಗ ಸರ್ಕಾರ ಅನುಸರಿಸಿದ ಪದ್ಧತಿ ಯಾವುದು;

ಆ) ರಾಜಕೀಯ ಹಸ್ತಕ್ಷೇಪ ಪ್ರಭಾವ ಬೀರದ ಹಾಗೆ ಮೀಸಲಾತಿ ನಿರ್ಣಯಗಳು ಆಗಿದೆಯೇ?

ಇ) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷ ಉಪಾಧ್ಯಕ್ಷರ ಪದವಿಗಳಿಗೆ ಈ ಮೊದಲು ಇದ್ದ ಮೀಸಲಾತಿ ಯಾವುವು? ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿಗಳಾವುವು? ಜಿಲ್ಲಾವಾರು ಮಾಹಿತಿ ನೀಡುವುದು)

ಈ) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಪದವಿಗಳಿಗೆ ಈ ಮೊದಲು ಇದ್ದ ಮೀಸಲಾತಿ ಏನು? ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿಗಳಾವುವು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು 1995 ಹಾಗೂ ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು 1995ರಲ್ಲಿ ನಿಗಧಿಪಡಿಸಲಾದ ಪದ್ಧತಿಯನ್ನು ಅನುಸರಿಸಿ ಈಗ ನಡೆಯಲಿರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಗೆ ಮೀಸಲಾತಿ ಮಾಡಲಾಗಿದೆ.

ಆ) ಹೌದು.

ಇ) ಜಿಲ್ಲಾ ಪಂಚಾಯತಿಯಲ್ಲಿ ಮೊದಲಿದ್ದ ಮೀಸಲಾತಿ ಆದೇಶ ಸಂಖ್ಯೆ: ಗ್ರಾಅಪ. 147 ಜಿಪಸ.95 ದಿನಾಂಕ 18-7-95 ಮತ್ತು ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿ ಆದೇಶ ಗ್ರಾಅಪ 315. ಜಿಪಸ. 96 ದಿ : 7-3-97. ಆದೇಶಗಳ ಪ್ರತಿಗಳನ್ನು ಲಗತ್ತಿಸಿದೆ.

ಈ) ಈ ಹಿಂದೆ ಇದ್ದ ಮೀಸಲಾತಿ ಬಗ್ಗೆ ಆದೇಶ ಸಂಖ್ಯೆ : ಗ್ರಾಅಪ : 148 : ಜಿಪಸ : 95 ದಿ: 18-2-95 ಮತ್ತು ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿ ಆದೇಶ ಸಂಖ್ಯೆ: ಗ್ರಾಅಪ:427:ತಾಪಸ:96 ದಿನಾಂಕ : 7-3-97.

ಕರ್ನಾಟಕ ಸರ್ಕಾರ

ಸಂಖ್ಯೆ ಗ್ರಾಅಪ 147 ಜಿಪಸ 95

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 18-2-1995.

ಆದೇಶ

ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು 1995ರ ನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಜಿಲ್ಲಾ ಪಂಚಾಯತಿಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಾದವರಿಗೆ ಹಂಚಿಕೆಯಾದ ಹುದ್ದೆಗಳು ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ
(ಪಾರ್ವತಿ ಕೇಶವಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ಯ ಇಲಾಖೆ.

ಅನುಬಂಧ

ಜಿಲ್ಲಾ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಹುದ್ದೆಗಳು

(ಆದೇಶ ಸಂಖ್ಯೆ ಗ್ರಾ ಅಪ 147 ಜಿಪಸ 95ದ, ದಿನಾಂಕ:18-2-1995)

ಕ್ರ.ಸಂ.	ಜಿಲ್ಲೆ	ಅಧ್ಯಕ್ಷ	ಉಪಾಧ್ಯಕ್ಷ
1	2	3	4
1.	ಬೆಂಗಳೂರು	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಅ
2.	ಬೆಂಗಳೂರು (ಗ್ರಾಮಾಂತರ)	ಸಾಮಾನ್ಯ	ಪರಿಶಿಷ್ಟ ಜಾತಿ (ಮಹಿಳೆ)
3.	ಚಿತ್ರದುರ್ಗ	ಪರಿಶಿಷ್ಟ ಪಂಗಡ	ಸಾಮಾನ್ಯ
4.	ಕೋಲಾರ	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ-ಬ
5.	ಶಿವಮೊಗ್ಗ	ಸಾಮಾನ್ಯ (ಮಹಿಳೆ)	ಪರಿಶಿಷ್ಟ ಜಾತಿ
6.	ತುಮಕೂರು	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)
7.	ಚಿಕ್ಕಮಗಳೂರು	ಸಾಮಾನ್ಯ (ಮಹಿಳೆ)	ಪರಿಶಿಷ್ಟ ಜಾತಿ
8.	ದಕ್ಷಿಣ ಕನ್ನಡ	ಹಿಂದುಳಿದ ವರ್ಗ-ಅ (ಮಹಿಳೆ)	ಸಾಮಾನ್ಯ
9.	ಹಾಸನ	ಸಾಮಾನ್ಯ	ಹಿಂದುಳಿದ ವರ್ಗ-ಅ (ಮಹಿಳೆ)
10.	ಕೊಡಗು	ಹಿಂದುಳಿದ ವರ್ಗ-ಅ (ಮಹಿಳೆ)	ಸಾಮಾನ್ಯ
11.	ಮಂಡ್ಯ	ಸಾಮಾನ್ಯ	ಹಿಂದುಳಿದ ವರ್ಗ -ಅ (ಮಹಿಳೆ)
12.	ಮೈಸೂರು	ಸಾಮಾನ್ಯ	ಪರಿಶಿಷ್ಟ ಜಾತಿ (ಮಹಿಳೆ)
13.	ಬೆಳಗಾವಿ	ಹಿಂದುಳಿದ ವರ್ಗ-ಬ	ಹಿಂದುಳಿದ ವರ್ಗ-ಅ
14.	ಬಿಜಾಪುರ	ಹಿಂದುಳಿದ ವರ್ಗ-ಅ	ಸಾಮಾನ್ಯ
15.	ಧಾರವಾಡ	ಸಾಮಾನ್ಯ	ಹಿಂದುಳಿದ ವರ್ಗ-ಅ
16.	ಉತ್ತರ ಕನ್ನಡ	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)
17.	ಬಳ್ಳಾರಿ	ಸಾಮಾನ್ಯ (ಮಹಿಳೆ)	ಪರಿಶಿಷ್ಟ ಪಂಗಡ
18.	ಬೀದರ್	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಅ (ಮಹಿಳೆ)
19.	ಗುಲ್ಬರ್ಗ	ಪರಿಶಿಷ್ಟ ಜಾತಿ (ಮಹಿಳೆ)	ಸಾಮಾನ್ಯ
20.	ರಾಯಚೂರು	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)

ಸಹಿ:

(ಪಾರ್ವತಿ ಕೇಶವಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್.ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 148 ಬಿಪಸ 95

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 18ನೇ ಫೆಬ್ರವರಿ 1995

ಆದೇಶ

ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು, 1995ರ ನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರದ ತಾಲ್ಲೂಕು ಪಂಚಾಯಿತಿಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿದವರಿಗೆ ಹಂಚಿಕೆಯಾದ ಹುದ್ದೆಗಳು ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಸಹಿ
(ಪಾರ್ವತಿ ಕೇಶವಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅನುಬಂಧ

ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಹುದ್ದೆಗಳು

(ಆದೇಶ ಸಂಖ್ಯೆ:ಗ್ರಾಅಪ 148 ಬಿಪಸ 95, ದಿನಾಂಕ 18ನೇ ಫೆಬ್ರವರಿ 1995)

ಕ್ರ.ಸಂ.	ಜಿಲ್ಲೆ	ಅಧ್ಯಕ್ಷ	ಉಪಾಧ್ಯಕ್ಷ
1	2	3	4
		ಬೆಂಗಳೂರು ಜಿಲ್ಲೆ	
1.	ಬೆಂಗಳೂರು ಉತ್ತರ	ಹಿಂದುಳಿದ ವರ್ಗ-ಅ(ಮಹಿಳೆ)	ಪರಿಶಿಷ್ಟ ಜಾತಿ
2.	ಬೆಂಗಳೂರು ದಕ್ಷಿಣ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
3.	ಆನೇಕಲ್	ಪರಿಶಿಷ್ಟ ಜಾತಿ	ಸಾಮಾನ್ಯ
		ಬೆಂಗಳೂರು ಗ್ರಾಮಾಂತರ ಜಿಲ್ಲೆ	
1.	ಚನ್ನಪಟ್ಟಣ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
2.	ದೇವನಹಳ್ಳಿ	ಪರಿಶಿಷ್ಟ ಜಾತಿ(ಮಹಿಳೆ)	ಸಾಮಾನ್ಯ
3.	ದೊಡ್ಡಬಳ್ಳಾಪುರ		ಹಿಂದುಳಿದ ವರ್ಗ-ಅ(ಮಹಿಳೆ)
4.	ಹೊಸಕೋಟೆ	ಪರಿಶಿಷ್ಟ ಜಾತಿ	ಸಾಮಾನ್ಯ(ಮಹಿಳೆ)
5.	ಕನಕಪುರ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
6.	ಮಾಗಡಿ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
7.	ನೆಲಮಂಗಲ	ಹಿಂದುಳಿದ ವರ್ಗ-ಅ	ಪರಿಶಿಷ್ಟ ಜಾತಿ
8.	ರಾಮನಗರ	ಸಾಮಾನ್ಯ	ಹಿಂದುಳಿದ ವರ್ಗ-ಬ
		ಚಿತ್ರದುರ್ಗ - ಜಿಲ್ಲೆ	
1.	ಚಳ್ಳಕೆರೆ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಜಾತಿ
2.	ಚಿತ್ರದುರ್ಗ	ಪರಿಶಿಷ್ಟ ಜಾತಿ (ಮಹಿಳೆ)	ಸಾಮಾನ್ಯ
3.	ದಾವಣಗೆರೆ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
4.	ಹರಿಹರ	ಸಾಮಾನ್ಯ	ಹಿಂದುಳಿದ ವರ್ಗ-ಅ
5.	ಹಿರಿಯೂರು	ಪರಿಶಿಷ್ಟ ಜಾತಿ	ಸಾಮಾನ್ಯ (ಮಹಿಳೆ)
6.	ಹೊಳಲ್ಕೆರೆ	ಸಾಮಾನ್ಯ	ಪರಿಶಿಷ್ಟ ಜಾತಿ (ಮಹಿಳೆ)
7.	ಹೊಸದುರ್ಗ	ಹಿಂದುಳಿದ ವರ್ಗ-ಅ	ಸಾಮಾನ್ಯ
8.	ಜಗಳೂರು	ಹಿಂದುಳಿದ ವರ್ಗ-ಅ	ಪರಿಶಿಷ್ಟ ಜಾತಿ
9.	ಮೊಳಕಾಲ್ಮೂರು	ಪರಿಶಿಷ್ಟ ಪಂಗಡ	ಸಾಮಾನ್ಯ ಮಹಿಳೆ

1	2	3	4
		ಕೋಲಾರ ಜಿಲ್ಲೆ	
1.	ಬಾಗೇಪಲ್ಲಿ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
2.	ಬಂಗಾರುಪೇಟೆ	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ-ಅ
3.	ಚಿಕ್ಕಬಳ್ಳಾಪುರ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಜಾತಿ
4.	ಚಿಂತಾಮಣಿ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
5.	ಗೌರಿಬಿದನೂರು	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ-ಅ
6.	ಗುಡಿಬಂಡೆ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಪಂಗಡ
7.	ಕೋಲಾರ	ಸಾಮಾನ್ಯ	ಪರಿಶಿಷ್ಟಜಾತಿ (ಮಹಿಳೆ)
8.	ಮಾಲೂರು	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)
9.	ಮುಳಬಾಗಿಲು	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಅ(ಮಹಿಳೆ)
10.	ಶಿಡ್ಲಘಟ್ಟ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
11.	ಶ್ರೀನಿವಾಸಪುರ	ಸಾಮಾನ್ಯ	ಹಿಂದುಳಿದ ವರ್ಗ-ಅ
		ಶಿವಮೊಗ್ಗ ಜಿಲ್ಲೆ	
1.	ಭದ್ರಾವತಿ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಜಾತಿ
2.	ಚನ್ನಗಿರಿ	ಸಾಮಾನ್ಯ	ಪರಿಶಿಷ್ಟ ಜಾತಿ (ಮಹಿಳೆ)
3.	ಹೊನ್ನಾಳಿ	ಹಿಂದುಳಿದ ವರ್ಗ-ಬ	ಸಾಮಾನ್ಯ (ಮಹಿಳೆ)
4.	ಹೊಸನಗರ	ಸಾಮಾನ್ಯ	ಹಿಂದುಳಿದ ವರ್ಗ-ಅ (ಮಹಿಳೆ)
5.	ಸಾಗರ	ಸಾಮಾನ್ಯ	ಹಿಂದುಳಿದ ವರ್ಗ-ಅ
6.	ಶಿಕಾರಿಪುರ	ಪರಿಶಿಷ್ಟಜಾತಿ	ಸಾಮಾನ್ಯ
7.	ಶಿವಮೊಗ್ಗ	ಪರಿಶಿಷ್ಟಜಾತಿ (ಮಹಿಳೆ)	ಹಿಂದುಳಿದ ವರ್ಗ-ಬ
8.	ಸೊರಬ	ಹಿಂದುಳಿದ ವರ್ಗ-ಅ	ಸಾಮಾನ್ಯ
9.	ತೀರ್ಥಹಳ್ಳಿ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
		ತುಮಕೂರು ಜಿಲ್ಲೆ	
1.	ಚಿಕ್ಕನಾಯಕಹಳ್ಳಿ	ಸಾಮಾನ್ಯ(ಮಹಿಳೆ)	ಪರಿಶಿಷ್ಟಜಾತಿ
2.	ಗುಬ್ಬಿ	ಹಿಂದುಳಿದ ವರ್ಗ-ಅ	ಸಾಮಾನ್ಯ
3	ಕೊರಟಗೆರೆ	ಪರಿಶಿಷ್ಟಜಾತಿ (ಮಹಿಳೆ)	ಸಾಮಾನ್ಯ
4.	ಕುಣಿಗಲ್	ಹಿಂದುಳಿದ ವರ್ಗ-ಬ	ಸಾಮಾನ್ಯ(ಮಹಿಳೆ)
5.	ಮಧುಗಿರಿ	ಸಾಮಾನ್ಯ	ಪರಿಶಿಷ್ಟ ಪಂಗಡ

1	2	3	4
6.	ಪಾವಗಡ	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಅ
7.	ಸಿರಾ	ಪರಿಶಿಷ್ಟಜಾತಿ	ಹಿಂದುಳಿದ ವರ್ಗ-ಬ
8.	ತಿಪಟೂರು	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
9.	ತುಮಕೂರು	ಸಾಮಾನ್ಯ	ಪರಿಶಿಷ್ಟ ಜಾತಿ(ಮಹಿಳೆ)
10.	ತುರುವೇಕೆರೆ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
		ಚಿಕ್ಕಮಗಳೂರು ಜಿಲ್ಲೆ	
1.	ಚಿಕ್ಕಮಗಳೂರು	ಹಿಂದುಳಿದ ವರ್ಗ-ಅ(ಮಹಿಳೆ)	ಪರಿಶಿಷ್ಟಜಾತಿ
2.	ಕಡೂರು	ಸಾಮಾನ್ಯ	ಪರಿಶಿಷ್ಟಜಾತಿ
3.	ಕೊಪ್ಪ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
4.	ಮೂಡಿಗೆರೆ	ಪರಿಶಿಷ್ಟಜಾತಿ	ಸಾಮಾನ್ಯ
5.	ನರಸಿಂಹರಾಜಪುರ	ಹಿಂದುಳಿದ ವರ್ಗ-ಅ	ಸಾಮಾನ್ಯ
6.	ಶೃಂಗೇರಿ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
7.	ತರೀಕೆರೆ	ಪರಿಶಿಷ್ಟಜಾತಿ	ಸಾಮಾನ್ಯ(ಮಹಿಳೆ)
		ದಕ್ಷಿಣ ಕನ್ನಡ ಜಿಲ್ಲೆ	
1.	ಬಂಟ್ವಾಳ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
2.	ಬೆಳ್ತಂಗಡಿ	ಪರಿಶಿಷ್ಟಜಾತಿ	ಹಿಂದುಳಿದ ವರ್ಗ-ಅ(ಮಹಿಳೆ)
3.	ಕಾರ್ಕಳ	ಸಾಮಾನ್ಯ	ಪರಿಶಿಷ್ಟಜಾತಿ
4.	ಕುಂದಾಪುರ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
5.	ಮಂಗಳೂರು	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
6.	ಪುತ್ತೂರು	ಸಾಮಾನ್ಯ	ಪರಿಶಿಷ್ಟ ಪಂಗಡ(ಮಹಿಳೆ)
7.	ಸುಳ್ಯ	ಪರಿಶಿಷ್ಟ ಪಂಗಡ(ಮಹಿಳೆ)	ಹಿಂದುಳಿದ ವರ್ಗ-ಅ
8.	ಉಡುಪಿ	ಹಿಂದುಳಿದ ವರ್ಗ-ಅ	ಸಾಮಾನ್ಯ
		ಹಾಸನಜಿಲ್ಲೆ	
1.	ಆಲೂರು	ಸಾಮಾನ್ಯ(ಮಹಿಳೆ)	ಪರಿಶಿಷ್ಟಜಾತಿ
2.	ಅರಕಲಗೂಡು	ಹಿಂದುಳಿದ ವರ್ಗ-ಅ	ಪರಿಶಿಷ್ಟಜಾತಿ(ಮಹಿಳೆ)
3.	ಅರಸೀಕೆರೆ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
4.	ಬೇಲೂರು	ಪರಿಶಿಷ್ಟಜಾತಿ (ಮಹಿಳೆ)	ಸಾಮಾನ್ಯ
5.	ಚೆನ್ನರಾಯಪಟ್ಟಣ	ಸಾಮಾನ್ಯ	ಹಿಂದುಳಿದ ವರ್ಗ-ಅ

1	2	3	4
6.	ಹೊಳೆನರಸೀಪುರ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
7.	ಹಾಸನ	ಸಾಮಾನ್ಯ	ಹಿಂದುಳಿದ ವರ್ಗ- ಅ
8.	ಸಕಲೇಶಪುರ	ಪರಿಶಿಷ್ಟ ಜಾತಿ	ಹಿಂದುಳಿದವರ್ಗ-ಅ(ಮಹಿಳೆ)
		ಕೊಡಗು ಜಿಲ್ಲೆ	
1.	ಮಡಿಕೇರಿ	ಹಿಂದುಳಿದ ವರ್ಗ-ಅ	ಪರಿಶಿಷ್ಟ ಪಂಗಡ (ಮಹಿಳೆ)
2.	ಸೋಮವಾರಪೇಟೆ	ಸಾಮಾನ್ಯ	ಹಿಂದುಳಿದ ವರ್ಗ-ಅ
3.	ವಿರಾಜಪೇಟೆ	ಪರಿಶಿಷ್ಟ ಪಂಗಡ(ಮಹಿಳೆ)	ಸಾಮಾನ್ಯ
		ಮಂಡ್ಯಜಿಲ್ಲೆ	
1.	ಕೃಷ್ಣರಾಜಪೇಟೆ	ಸಾಮಾನ್ಯ	ಹಿಂದುಳಿದವರ್ಗ- ಬ(ಮಹಿಳೆ)
2.	ಮದ್ದೂರು	ಸಾಮಾನ್ಯ(ಮಹಿಳೆ)	ಸಾಮಾನ್ಯ
3.	ಮಳವಳ್ಳಿ	ಪರಿಶಿಷ್ಟಜಾತಿ	ಸಾಮಾನ್ಯ
4.	ಮಂಡ್ಯ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
5.	ನಾಗಮಂಗಲ	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)
6.	ಪಾಂಡವಪುರ	ಸಾಮಾನ್ಯ	ಹಿಂದುಳಿದ ವರ್ಗ-ಅ
7.	ಶ್ರೀರಂಗಪಟ್ಟಣ	ಸಾಮಾನ್ಯ	ಪರಿಶಿಷ್ಟ ಜಾತಿ
		ಮೈಸೂರು ಜಿಲ್ಲೆ	
1.	ಚಾಮರಾಜನಗರ	ಸಾಮಾನ್ಯ	ಹಿಂದುಳಿದವರ್ಗ- ಅ(ಮಹಿಳೆ)
2.	ಗುಂಡ್ಲುಪೇಟೆ	ಹಿಂದುಳಿದ ವರ್ಗ-ಬ	ಸಾಮಾನ್ಯ(ಮಹಿಳೆ)
3.	ಹೆಗ್ಗಡದೇವನಕೋಟೆ	ಹಿಂದುಳಿದ ವರ್ಗ-ಅ	ಪರಿಶಿಷ್ಟಜಾತಿ
4.	ಹುಣಸೂರು	ಸಾಮಾನ್ಯ	ಹಿಂದುಳಿದ ವರ್ಗ-ಅ
5.	ಕೊಳ್ಳೆಗಾಲ	ಪರಿಶಿಷ್ಟಜಾತಿ	ಸಾಮಾನ್ಯ
6.	ಕೆ.ಆರ್.ನಗರ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
7.	ಮೈಸೂರು	ಸಾಮಾನ್ಯ	ಸಾಮಾನ್ಯ(ಮಹಿಳೆ)
8.	ನಂಜನಗೂಡು	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
9.	ಪಿರಿಯಾಪಟ್ಟಣ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಬ
10.	ಟಿ.ನರಸೀಪುರ	ಹಿಂದುಳಿದ ವರ್ಗ-ಅ	ಪರಿಶಿಷ್ಟ ಜಾತಿ (ಮಹಿಳೆ)
11.	ಯಳಂದೂರು	ಪರಿಶಿಷ್ಟಜಾತಿ(ಮಹಿಳೆ)	ಸಾಮಾನ್ಯ

1	2	3	4
		ಬೆಳಗಾವಿ ಜಿಲ್ಲೆ	
1.	ಅಥಣಿ	ಸಾಮಾನ್ಯ	ಪರಿಶಿಷ್ಟ ಜಾತಿ
2.	ಬೈಲಹೊಂಗಲ	ಹಿಂದುಳಿದ ವರ್ಗ-ಬ (ಮಹಿಳೆ)	ಸಾಮಾನ್ಯ
3.	ಬೆಳಗಾವಿ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
4.	ಚಿಕ್ಕೋಡಿ	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಬ (ಮಹಿಳೆ)
5.	ಗೋಕಾಕ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
6.	ಹುಕ್ಕೇರಿ	ಸಾಮಾನ್ಯ	ಪರಿಶಿಷ್ಟ ಜಾತಿ
7.	ಖಾನಾಪುರ	ಹಿಂದುಳಿದ ವರ್ಗ-ಅ	ಸಾಮಾನ್ಯ
8.	ರಾಯಭಾಗ್	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಅ
9.	ರಾಮದುರ್ಗ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
10.	ಸವದತ್ತಿ	ಸಾಮಾನ್ಯ	ಹಿಂದುಳಿದವರ್ಗ-ಅ(ಮಹಿಳೆ)
		ಬಿಜಾಪುರ ಜಿಲ್ಲೆ	
1.	ಬಾದಾಮಿ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
2.	ಬಾಗಲಕೋಟೆ	ಸಾಮಾನ್ಯ	ಹಿಂದುಳಿದ ವರ್ಗ-ಅ
3.	ಬಸವನಬಾಗೇವಾಡಿ	ಹಿಂದುಳಿದ ವರ್ಗ-ಅ	ಪರಿಶಿಷ್ಟ ಜಾತಿ
4.	ಬೀಳಗಿ	ಹಿಂದುಳಿದ ವರ್ಗ-ಅ	ಸಾಮಾನ್ಯ
5.	ಬಿಜಾಪುರ	ಪರಿಶಿಷ್ಟಜಾತಿ(ಮಹಿಳೆ)	ಸಾಮಾನ್ಯ
6.	ಹುನಗುಂದ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
7.	ಇಂಡಿ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಬ
8.	ಜಮಖಿಂಡಿ	ಹಿಂದುಳಿದ ವರ್ಗ-ಬ	ಸಾಮಾನ್ಯ (ಮಹಿಳೆ)
9.	ಮುದ್ದೇಬಿಹಾಳ	ಪರಿಶಿಷ್ಟ ಜಾತಿ	ಸಾಮಾನ್ಯ(ಮಹಿಳೆ)
10.	ಮುಧೋಳ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
11.	ಸಿಂಧಗಿ	ಸಾಮಾನ್ಯ	ಪರಿಶಿಷ್ಟ ಜಾತಿ(ಮಹಿಳೆ)
		ಧಾರವಾಡ ಜಿಲ್ಲೆ	
1.	ಬ್ಯಾಡಗಿ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
2.	ಧಾರವಾಡ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಬ
3.	ಗದಗ	ಸಾಮಾನ್ಯ	ಪರಿಶಿಷ್ಟಜಾತಿ
4.	ಹಾನಗಲ್	ಸಾಮಾನ್ಯ	ಪರಿಶಿಷ್ಟ ಜಾತಿ(ಮಹಿಳೆ)
5.	ಹಾವೇರಿ	ಹಿಂದುಳಿದ ವರ್ಗ-ಬ	ಸಾಮಾನ್ಯ
6.	ಹಿರೇಕೆರೂರು	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)

1	2	3	4
7.	ಹುಬ್ಬಳ್ಳಿ	ಸಾಮಾನ್ಯ	ಹಿಂದುಳಿದ ವರ್ಗ-ಅ
8.	ಕಲಘಟಗಿ	ಸಾಮಾನ್ಯ(ಮಹಿಳೆ)	ಸಾಮಾನ್ಯ
9.	ಕುಂದಗೋಳ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
10.	ಮುಂಡರಗಿ	ಪರಿಶಿಷ್ಟ ಜಾತಿ(ಮಹಿಳೆ)	ಸಾಮಾನ್ಯ
11.	ನರಗುಂದ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
12.	ನವಲಗುಂದ	ಹಿಂದುಳಿದ ವರ್ಗ-ಬ(ಮಹಿಳೆ)	ಸಾಮಾನ್ಯ
13.	ರಾಣೆಬೆನ್ನೂರು	ಹಿಂದುಳಿದ ವರ್ಗ-ಅ	ಹಿಂದುಳಿದ ವರ್ಗ-ಅ
14.	ರೋಣ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
15.	ಸವಣೂರು	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
16.	ಶಿಗ್ಗಾಂವ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
17.	ಶಿರಹಟ್ಟಿ	ಪರಿಶಿಷ್ಟ ಜಾತಿ	ಸಾಮಾನ್ಯ
		ಉತ್ತರ ಕನ್ನಡ ಜಿಲ್ಲೆ	
1.	ಮುಂಡಗೋಡ	ಪರಿಶಿಷ್ಟ ಜಾತಿ	ಸಾಮಾನ್ಯ
2.	ಹಳಿಯಾಳ	ಸಾಮಾನ್ಯ	ಹಿಂದುಳಿದ ವರ್ಗ-ಅ
3.	ಯಲ್ಲಾಪುರ	ಸಾಮಾನ್ಯ	ಸಾಮಾನ್ಯ(ಮಹಿಳೆ)
4.	ಕಾರವಾರ	ಹಿಂದುಳಿದ ವರ್ಗ-ಅ	ಸಾಮಾನ್ಯ
5.	ಭಟ್ಕಳ್	ಹಿಂದುಳಿದ ವರ್ಗ-ಅ(ಮಹಿಳೆ)	ಪರಿಶಿಷ್ಟ ಜಾತಿ
6.	ಅಂಕೋಲ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
7.	ಸಿದ್ದಾಪುರ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
8.	ಸಿರ್ಸಿ	ಸಾಮಾನ್ಯ(ಮಹಿಳೆ)	ಸಾಮಾನ್ಯ
9.	ಕುಮಟಾ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
10.	ಜೋಯಿಡಾ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
11.	ಹೊನ್ನಾವರ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
		ಬಳ್ಳಾರಿ ಜಿಲ್ಲೆ	
1.	ಬಳ್ಳಾರಿ	ಹಿಂದುಳಿದ ವರ್ಗ-ಬ(ಮಹಿಳೆ)	ಸಾಮಾನ್ಯ
2.	ಹಡಗಲಿ	ಸಾಮಾನ್ಯ	ಹಿಂದುಳಿದ ವರ್ಗ-ಅ
3.	ಹಗರಿ ಬೊಮ್ಮನಹಳ್ಳಿ	ಹಿಂದುಳಿದ ವರ್ಗ-ಅ	ಸಾಮಾನ್ಯ(ಮಹಿಳೆ)
4.	ಹರಪನಹಳ್ಳಿ	ಸಾಮಾನ್ಯ	ಪರಿಶಿಷ್ಟ ಜಾತಿ
5.	ಹೊಸಪೇಟೆ	ಪರಿಶಿಷ್ಟ ಜಾತಿ	ಹಿಂದುಳಿದ ವರ್ಗ-ಬ(ಮಹಿಳೆ)

1	2	3	4
6.	ಕೂಡ್ಲಗಿ	ಪರಿಶಿಷ್ಟ ಪಂಗಡ(ಮಹಿಳೆ)	ಸಾಮಾನ್ಯ
7.	ಸಂಡೂರು	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಪಂಗಡ(ಮಹಿಳೆ)
8.	ಸಿರಗುಪ್ಪ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
		ಬೀದರ್ ಜಿಲ್ಲೆ	
1.	ಔರಾದ	ಪರಿಶಿಷ್ಟ ಜಾತಿ	ಸಾಮಾನ್ಯ
2.	ಬಸವ ಕಲ್ಯಾಣ	ಸಾಮಾನ್ಯ	ಪರಿಶಿಷ್ಟ ಪಂಗಡ
3.	ಭಾಲ್ಕಿ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಜಾತಿ
4.	ಬೀದರ್	ಹಿಂದುಳಿದ ವರ್ಗ-ಅ	ಸಾಮಾನ್ಯ (ಮಹಿಳೆ)
5.	ಹುಮ್ನಾಬಾದ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ-ಅ
		ಗುಲ್ಬರ್ಗಾ ಜಿಲ್ಲೆ	
1.	ಅಫಜಲ್ಪುರ	ಹಿಂದುಳಿದ ವರ್ಗ-ಅ(ಮಹಿಳೆ)	ಸಾಮಾನ್ಯ
2.	ಆಳಂದ	ಸಾಮಾನ್ಯ	ಪರಿಶಿಷ್ಟ ಜಾತಿ
3.	ಚಿಂಚೋಳಿ	ಪರಿಶಿಷ್ಟ ಜಾತಿ(ಮಹಿಳೆ)	ಸಾಮಾನ್ಯ
4.	ಚಿತ್ತಾಪುರ	ಪರಿಶಿಷ್ಟ ಜಾತಿ	ಸಾಮಾನ್ಯ(ಮಹಿಳೆ)
5.	ಗುಲ್ಬರ್ಗಾ	ಸಾಮಾನ್ಯ	ಪರಿಶಿಷ್ಟ ಜಾತಿ(ಮಹಿಳೆ)
6.	ಜೇವರ್ಗಿ	ಸಾಮಾನ್ಯ(ಮಹಿಳೆ)	ಹಿಂದುಳಿದ ವರ್ಗ-ಅ
7.	ಸೇಡಂ	ಹಿಂದುಳಿದ ವರ್ಗ-ಅ	ಸಾಮಾನ್ಯ
8.	ಶಹಾಪುರ	ಸಾಮಾನ್ಯ	ಹಿಂದುಳಿದ ವರ್ಗ-ಅ(ಮಹಿಳೆ)
9.	ಶೋರಾಪುರ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ-ಬ
10.	ಯಾದಗೀರ್	ಹಿಂದುಳಿದ ವರ್ಗ-ಬ	ಪರಿಶಿಷ್ಟ ಪಂಗಡ
		ರಾಯಚೂರು ಜಿಲ್ಲೆ	
1.	ದೇವದುರ್ಗ	ಪರಿಶಿಷ್ಟ ಜಾತಿ	ಸಾಮಾನ್ಯ (ಮಹಿಳೆ)
2.	ಗಂಗಾವತಿ	ಸಾಮಾನ್ಯ(ಮಹಿಳೆ)	ಪರಿಶಿಷ್ಟ ಪಂಗಡ
3.	ಕೊಪ್ಪಳ	ಹಿಂದುಳಿದ ವರ್ಗ- ಅ	ಪರಿಶಿಷ್ಟ ಜಾತಿ
4.	ಕುಷ್ಟಗಿ	ಸಾಮಾನ್ಯ	ಹಿಂದುಳಿದ ವರ್ಗ- ಅ
5.	ಲಿಂಗಸುಗೂರು	ಪರಿಶಿಷ್ಟ ಜಾತಿ(ಮಹಿಳೆ)	ಸಾಮಾನ್ಯ
6.	ಮಾನ್ವಿ	ಪರಿಶಿಷ್ಟ ಪಂಗಡ	ಸಾಮಾನ್ಯ
7.	ರಾಯಚೂರು	ಸಾಮಾನ್ಯ	ಪರಿಶಿಷ್ಟ ಜಾತಿ(ಮಹಿಳೆ)
8.	ಸಿಂಧನೂರು	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ- ಅ
9.	ಯಲ್ಬುರ್ಗಾ	ಹಿಂದುಳಿದ ವರ್ಗ- ಅ	ಸಾಮಾನ್ಯ (ಮಹಿಳೆ)

ಕರ್ನಾಟಕ ರಾಜ್ಯ ಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - 4 ಸೆಕ್ಷನ್ - 2- 3 (ii)

ಬೆಂಗಳೂರು, ಮಂಗಳವಾರ, ಮಾರ್ಚ್ 11,1997 ನಂ. 317

(ಫಾಲ್ಗುಣ 20 ಶಕ, ವರ್ಷ 1918)

RDP 325 ZPS 96

Karnataka Government Secretariat
Multi Storyed Building,
Bangalore, dated -7.3.1997.

ORDER

1. Where as the officesof Adhyaksha and Upadhyaksha of Zilla Panchayats is the States were alloted for the Scheduled Castes, Scheduled Tribes, Backward Classes and Women for the unreserved category in Government Order No.RDP 147 ZPS 95 Dated.18.2.1995.

2. Where as section 177 of the Karnataka Panchayat Raj act, 1993 has been amended providing that the term of office of every Adhyaksha and every Upadhyaksha of Zilla Panchayat shall be twenty months from the date of his election.

3. Where as after the first constitution of the Zilla Panchayat the Adhyaksha and Upadhyaksha were elected during the period from May 3-10,1995 and that their term of office of 20 months has expired during the period from January 3-10, 1997.

4. And where as the offices of Adhyaksha and Upadhyaksha of Zilla Panchayat in the State have to be rotated between Zilla Panchayats from the term to term and,

5. Now therefore, in exercise of powers conferred by rule 4 read with rule 3 of the Karnataka Panchayat Raj (Reservation of offices of Adhyaksha and

Upadhyaksha of Zilla Panchayat) Rules, 1995 the Government of Karnataka hereby order that allottment of offices of Adhyakshas and Upadhyakshas of Zilla Panchayats reserved for the Scheduled Castes, Scheduled Tribes, Backward Classes and women and those which are unreserved shall be as specified in the Annexure to this order.

By Order and the Name of the
Governor of Karnataka

(K.B. Basappa)
Director, Panchayat Raj &
Ex-Officio Dy. Secretary
Rural Development &
Panchayat Raj Departments

ANNEXURE

RESERVATION OF OFFICES OF ADHYAKSHA & UPADHAKSHA OF ZILLA PANCHAYATS

(Govt. Order No. RDP 315 ZPS 96 and dated 7/3/1997)

Sl. No.	Name of District	Adhyaksha	Upadhayaksha
01.	Bangalore	Unreserved (W)	S.C
02.	Bangalore(Rural)	B.C.B	B.C.A
03.	Chitradurga	Unreserved	B.C.A(W)
04.	Kolar	B.C.A	Unreserved
05.	Shimoga	S.C.	Unreserved(W)
06.	Tumkur	S.C (W)	B.C.A
07.	Chikamagalore	B.C.A	Unreserved
08.	Dakshina Kannada	Unreserved	S.C.(W)
09.	Hassan	B.C.A (W)	S.C
10.	Kodagu	S.T	Unreserved (W)
11.	Mandya	S.C.(W)	Unreserved
12.	Mysore	B.C.A	Unreserved
13.	Belagaum	Unreserved	S.C.(W)
14.	Bijapur	S.C	B.C.A
15.	Dharwad	B.C.A(W)	Unreserved
16.	Uttara Kannada	Unreserved(W)	B.C.A
17.	Bellary	Unreserved	B.C.A(W)
18.	Bidar	Unreserved(W)	B.C.B
19.	Gulbarga	B.C.A	Unreserved(W)
20.	Raichur	Unreserved	S.T

INDEX:

S.C.	:	Scheduled Caste
S.T.	:	Scheduled Tribe
B.C.A	:	Backward Community `A' group
B.C.B	:	Backward Community `B' group
(W)	:	Woman

(K.B. Basappa)
Director, Panchayat Raj &
Ex-Officio Dy. Secretary
Rural Development &
Panchayat Raj Departments

ಕರ್ನಾಟಕ ರಾಜ್ಯ ಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - 4 ಸೆಕ್ಷನ್ - 2- 3 (ii)

ಬೆಂಗಳೂರು, ಮಂಗಳವಾರ, ಮಾರ್ಚ್ 11,1997 ನಂ. 318
(ಫಾಲ್ಗುಣ 20 ಶಕ, ವರ್ಷ 1918)

RDP 427 TPS 96

Karnataka Government Secretariat,
Multi Storyed Building,
Bangalore, dated 7.3.1997

ORDER

1. Where as the offices of Adhyaksha and Upadhyaksha of Taluk Panchyat in the State were allotted for the Scheduled castes, Scheduled Tribe, Backward Classes, women and for the unreserved category in Government order No. RDP 147 ZPS 95 dated 18.2.95

2. Where as section 138 of the Karnataka Panchayat Raj Act, 1993 has been amended providing that the term of office of every Adhyaksha and every Upadhyaksha of Taluk Panchayat shall be Twenty Months from the date of his election.

3. Where as after the first constitution of Taluk Panchayat the Adhyakshas and Upadhyakshas were elected during the period from May 3-10, 1995 and that the term of office of 20 months has expired during the period from Jan 3-10, 1997.

4. And where as the offices of Adhyakshas and Upadhyaksha of Taluk Panchayats in the State have to be rotated between Taluk Panchayats from term to term and,

5. Now therefore, in exercise of powers conferred by Rule 4 read with Rule 3 of the Karnataka Panchayat Raj (Reservation of offices of Adhyaksha and Upadhyaksha of Taluk Panchayat) Rules, 1995 the Government of Karnataka

hereby order that allottment of offices of Adhyakshas and Upadhyakshas of Taluk Panchayats reserved for the Scheduled Castes, Scheduled Tribe, Backward Classes and Women and those which are unreserved shall be as specified in the Annexure to this Order.

By Order and in the name of the
Governor of Karnataka

(K.B. Basappa)
Director, Panchayat Raj &
Ex-Officio Dy Secretary.
Rural Departments &
Panchayat Raj Department.

ANNEXURE

RESERVATION OF OFFICES OF ADHYAKSHA & UPADHAKSHA IN TALUK PANCHAYATS

(Govt. Order No. RDP 427 TPS 96 and dated 7/3/1997)

Sl. No.	Name of District	Adhyaksha	Upadhayaksha
1	2	3	4
	BANGALORE URBAN		
1.	Bangalore North	S C	B.C.A(W)
2.	Bangalore Sourth	B.C.A(w)	Unreserved
3.	Anekal	Unreserved	S.C.
	BANGALORE RURAL		
1.	Channapatna	B.C.A	S.C
2.	Devanahalli	Unreserved	B.C.A (W)
3.	Doddaballapura	Unreserved	B.C.A
4.	Hoskote	B.C.A (W)	B.C.B
5.	Kanakapura	Unreserved (W)	Unreserved
6.	Magadi	S.C	Unreserved(W)
7.	Nelamangala	S.C (W)	Unreserved
8.	Ramanagar	B.C.B	S.C (W)
	CHITRADURGA DISTRICT		
1.	Challakere	B.C.A	Unreserved(W)
2.	Chitradurga	Unreserved	S.C. (W)
3.	Davanagere	B.C.A.	Unreserved (W)
4.	Harihar	S.C. (W)	Unreserved
5.	Hiriyur	Unreserved	S.C.
6.	Holalkere	Unreserved (W)	Unreserved
7.	Hosdurga	S.C.	B.C.A.
8.	Jagalur	S.C.	B.C.A.
9.	Molakalmur	Unreserved	S.T.

1	2	3	4
		KOLAR DISTRICT	
1.	Bagepalli	S.C.	Unreserved(W)
2.	Bangarpet	B.C.B	S.C.(W)
3.	Chikkaballapur	Unreserved	B.C.A(w)
4.	Chintamani	S.T.	Unreserved
5.	Gouribidanaur	Unreserved(w)	B.C.A
6.	Gudibanda	B.C.A	Unreserved(w)
7.	Kolar	B.C.A.	Unreserved
8.	Mallur	S.C.(W)	B.C.A
9.	Mulbagal	unreserved(w)	B.C.B
10.	Sidlagatta	Unreserved	S.C.
11.	Srinivaspur	B.C.A	S.T
		SHIMOGA DISTRICT	
1.	Bhadravathi	B.C.B	Unreserved
2.	Channagiri	B.C.A(w)	Unreserved
3.	Honnali	S.C.(W)	Unreserved
4.	Hosanagara	S.C.	B.C.A.
5.	Sagar	B.C.A.	Unreserved
6.	Shikaripura	Unreserved(w)	B.C.B.
7.	Shimoga	Unreserved	B.C.A.(W)
8.	Soraba	Unreserved	S.C.(W)
9.	Thirthahalli	Unreserved	S.C.
		TUMKUR DISTRICT	
1.	Chikkanayakanahalli	B.C.A	Unreserved
2.	Gubbi	S.T.	Unreserved(W)
3.	Koratagere	Unreserved	B.C.B
4.	Kunigal	S.C.(W)	Unreserved
5.	Madhugiri	Unreserved	S.C.

1	2	3	4
6.	Pavagada	Unreserved	S.C(W)
7.	Sira	Unreserved	B.C.A
8.	Tiptur	B.C.B	S.T
9.	Tumkur	B.C.A(w)	Unreserved
10.	Turuvekere	S.C.	B.C.A(W)
		CHICKMAGALUR DISTRICT	
1.	Chickmagalur	Unreserved	B.C.A(W)
2.	Kadur	B.C.A	Unreserved
3.	Koppa	S.C.	Unreserved
4.	Mudigere	Unreserved(w)	B.C.A
5.	N.R.Pura	Unreserved	S.C
6.	Sringeri	S.C	Unreserved(w)
7.	Tarikere	B.C.A(W)	S.C.
		DAKSHINA KANNADA DISTRICT	
1.	Bantwal	S.T.(W)	B.C.A
2.	Belthangadi	Unreserved(w)	B.C.A
3.	Karkala	B.C.B(W)	Unreserved
4.	Kundapur	S.C.	B.C.B(W)
5.	Mangalore	Unreserved	S.C
6.	Puttur	B.C.A	Unreserved
7.	Sulya	B.C.A	Unreserved(w)
8.	Udupi	Unreserved	S.T.(W)
		HASSAN DISTRICT	
1.	Alur	Unreserved	Unreserved(W)
2.	Arakalgud	S.C.	B.C.A
3.	Belur	B.C.A	B.C.B(W)
4.	Arasikere	B.C.A	S.C.(W)

1	2	3	4
5.	Channarayapatna	S.C(W)	Unreserved
6.	Holenarasipura	Unreserved	B.C.A
7.	Hassan	B.C.B.(W)	Unreserved
8.	Sakaleshpura	Unreserved	S.C.
		KODAGU DISTRICT	
1.	Madikeri	Unreserved	B.C.A
2.	Somawarpet	S.T.(W)	Unreserved
3.	Virajpet	B.C.A	S.T.(W)
		MANDHYA DISTRICT	
1.	K.R.Pet	B.C.A(W)	Unreserved
2.	Maddur	S.C.	Unreserved(w)
3.	Malavalli	Unreserved	B.C.A(W)
4.	Mandya	Unreserved	S.C.
5.	Nagamangala	Unreserved	B.C.A
6.	Pandavapura	Unreserved(w)	Unreserved
7.	Srirangapatna	B.C.A	Unreserved
		MYSORE DISTRICT	
1.	Chamarajnagar	S.C(W)	unreserved
2.	Gundlupet	Unreserved(w)	S.C.
3.	H.D.Kote	Unreserved	B.C.A
4.	Hunsur	Unreserved(w)	Unreserved
5.	Kollegal	B.C.B	Unreserved
6.	Krishnarajanagar	Unreserved	B.C.A
7.	Mysore	B.C.A	Unreserved
8.	Nanjungud	S.C.	Unreserved(w)
9.	Piriyapatna	B.C.A	S.C.(W)
10.	T.Narasipur	B.C.A(W)	B.C.B
11.	Yalandur	Unreserved	B.C.A(W)

1	2	3	4
		BELGAUM DISTRICT	
1.	Athani	Unreserved (w)	B.C.A
2.	Bylahongala	Unreserved (w)	B.C.A
3.	Belgaum	-	Unreserved
4.	Chikkodi	Unreserved	B.C.A
5.	Gokak	-	Unreserved
6.	Hukkeri	-	B.C.B(W)
7.	Khanpur	Unreserved	S.C
8.	Raibagh		Unreserved
9.	Ramdurga		Unreserved(w)
10.	Saundatti		S.C.
		BIJAPUR DISTRICT	
1.	Badami	B.C.B	Unreserved
2.	Bagalkot	S.C(W)	Unreserved
3.	B.Bagewadi	Unreserved	B.C.A(W)
4.	Biligi	Unreserved(w)	S.C
5.	Bijapur	Unreserved	B.C.A
6.	Hungund	B.C.A	Unreserved(w)
7.	Indi	S.C.	Unreserved(w)
8.	Jamakhandi	Unreserved(w)	B.C.B
9.	Muddebihal	Unreserved	B.C.A
10.	Mudhol	B.C.A	S.C(W)
11.	Sindagi	B.C.A(W)	Unreserved
		DHARWAD DISTRICT	
1.	Byadagi	Unreserved	S.C
2.	Dharwad	Unreserved	Unreserved(w)
3.	Gadag	B.C.B	B.C.A
4.	Hanagal	Unreserved(w)	Unreserved

1	2	3	4
5.	Haveri	Unreserved	S.C (W)
6.	Hirekerur	Unreserved (w)	B.C.A
7.	Hubli	B.C.A (W)	Unreserved
8.	Kalagatagi	Unreserved	B.C.A (W)
9.	Kundagol	Unreserved	B.C.A (W)
10.	Mundargi	B.C.A	Unreserved (w)
11.	Naragund	B.C.A	Unreserved
12.	Navalagund	B.C.A	Unreserved (w)
13.	Ranebennur	S.C. (W)	Unreserved
14.	Ron	B.C.A (W)	Unreserved
15.	Savanur	S.C.	B.C.B
16.	Shiggaon	Unreserved (w)	Unreserved
17.	Shirahatti	Unreserved	B.C.A
		UTTARA KANNADA DISTRICT	
1.	Mundagod	Unreserved	B.C.A
2.	Haliyal	Unreserved (w)	Unreserved
3.	Yellapur	B.C.A	Unreserved
4.	Karwar	Unreserved	B.C.A (W)
5.	Bhatkal	Unreserved	Unreserved (w)
6.	Ankola	B.C.A (W)	Unreserved
7.	Siddapur	Unreserved	S.C
8.	Sirsi	S.C.	B.C.A (W)
9.	Kumuta	B.C.A (W)	Unreserved
10.	Joida	Unreserved (w)	B.C.A
11.	Honnavar	B.C.A	Unreserved
		BELLARY DISTRICT	
1.	Bellary	B.C.A	S.T (W)
2.	Hadagali	S.T. (W)	Unreserved

1	2	3	4
3.	H.B.Halli	Unreserved(w)	Unreserved
4.	Harapanahalli	S.C	Unreserved (w)
5.	Hospet	B.C.A	S.C
6.	Kudligi	Unreserved	B.C.A
7.	Sandur	B.C.B(W)	B.C.A
8.	Siruguppa	Unreserved	B.C.B (W)
		BIDAR DISTRICT	
1.	Aurad	B.C.A	S.C
2.	Basavakalyan	S.C	Unreserved
3.	Bhalki	Unreserved	Unreserved (w)
4.	Bidar	S.T	B.C.A
5.	Humnabad	Unreserved (W)	S.T
		GULBARGA DISTRICT	
1.	Afzalpur	B.C.B	S.C
2.	Aland	S.C.	Unreserved (w)
3.	Chincholi	Unreserved	B.C.A (W)
4.	Chittapur	Unreserved	B.C.A
5.	Gulbarga	B.C.A (W)	Unreserved
6.	Jewargi	B.C.A	S.T
7.	Sedam	Unreserved	S.C (W)
8.	Shahapur	S.T	B.C.B
9.	Shorapur	Unreserved (w)	Unreserved
10.	Yadgir	S.C (W)	Unreserved
		RAICHUR DISTRICT	
1.	Deodurga	Unreserved (w)	S.T
2.	Gangavathi	B.C.A	Unreserved
3.	Koppal	Unreserved	B.C.A

1	2	3	4
4.	Kushtagi	S.T.	Unreserved (w)
5.	Lingasugur	Unreserved	S.C (W)
6.	Manvi	Unreserved (w)	S.C
7.	Raichur	S.C	Unreserved
8.	Sindanur	B.C.A	Unreserved (w)
9.	Yelburga	S.C (W)	B.C.A

INDEX

S.C. : Scheduled Caste
S.T : Schedurled Tribe
B.C.A : Backward Class 'A' Group
B.C.B : Backward Class 'B' Group
(w) : Woman

(K.B.Basappa)
Director, Panchayat Raj &
Ex-officio Dy.Secretary.
Rural Development &
Panchayat Raj Department.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತಿಯೊಳಗೆ, ತಾಲ್ಲೂಕು ಪಂಚಾಯಿತಿಯೊಳಗೆ ಮೀಸಲಾತಿ ಮಾಡುವುದಕ್ಕೆ ಮೊದಲು ಮೂರು ಗುಂಪು ಇರುತ್ತವೆ. ಒಂದು ಜನರಲ್, ಆಮೇಲೆ ಎಸ್.ಸಿ./ ಎಸ್.ಟಿ, ಬ್ಯಾಕ್‌ವರ್ಡ್‌ಕ್ಲಾಸ್. ಈ ಗುಂಪಿನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಮತ್ತೆ ಬ್ಯಾಕ್‌ವರ್ಡ್ ಕ್ಲಾಸ್-ಎ, ಬ್ಯಾಕ್‌ವರ್ಡ್‌ಕ್ಲಾಸ್-ಬಿ, ಆಮೇಲೆ ಈ ಮೂರು ಗುಂಪಿನೊಳಗೆ ಮಹಿಳೆಯರಿಗೆ ರಿಸರ್ವೇಷನ್ ಮಾಡುವಂಥ ಕೆಲಸ ಸರ್ಕಾರ ತಾವು ಒದಗಿಸಿದ ಮಾಹಿತಿಯ ಮೇಲೆ ಮಾಡಿಲ್ಲ ಎನ್ನುವುದು ಗೋಚರವಾಗುತ್ತದೆ. ನಿಮ್ಮ ಗಮನಕ್ಕೆ ತರಬೇಕೆಂದರೆ, ಈಗ ಬೆಂಗಳೂರು ಗ್ರಾಮಾಂತರ ಅಧ್ಯಕ್ಷ, ಉಪಾಧ್ಯಕ್ಷ ಎರಡೂ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ರಿಸರ್ವ್ ಮಾಡಿದ್ದಾರೆ. ಆಮೇಲೆ ಧಾರವಾಡದಲ್ಲಿ ಹೋದಸಾರಿ ಅಧ್ಯಕ್ಷ ಪದವಿ ಜನರಲ್‌ಗೆ ಇತ್ತು, ಉಪಾಧ್ಯಕ್ಷ ಪದವಿ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಇತ್ತು. ಈ ಸಾರಿ ಅಧ್ಯಕ್ಷ ಪದವಿ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಇಟ್ಟಿರಿ, ಉಪಾಧ್ಯಕ್ಷ ಪದವಿ ಜನರಲ್‌ರವರಿಗೆ ಇಟ್ಟಿರಿ. ಹಾಗಾದರೆ ಪರಿಶಿಷ್ಟ ಜಾತಿಯವರಿಗೆ ಏನು?

12.00 ಪಿ.ಎಂ.

ನಾಲ್ಕು ನೀಟುಗಳು ಮೂರು ಗುಂಪುಗಳಿಗೆ ಅಂದಾಗ ಎಲ್ಲಿಯಾದರೂ ಪರಿಶಿಷ್ಟ ಜಾತಿಯವರು ಬರಬೇಕಾಗಿತ್ತು, ಬಂದಿಲ್ಲ. ಆಮೇಲೆ ಬಳ್ಳಾರಿಗೆ ಹೋದ ಸಾರಿ ಅಧ್ಯಕ್ಷ ಸ್ಥಾನ ಜನರಲ್ ಆಗಿದೆ. ಅಂದರೆ ಅವರಿಗೆ ಮೀಸಲು. ಮೀಸಲಾತಿ ನಿಯಮಗಳನ್ನು ನೀವು ಏನು ಫಾಲೋ ಮಾಡಿದ್ದೀರಿ? ತಾಲ್ಲೂಕು ಪಂಚಾಯಿತಿ ಬಗ್ಗೆಯೂ ಕೂಡ ತಾವು ಯೋಚಿಸಬೇಕಾಗುತ್ತದೆ. ಮೊದಲು ಜಿಲ್ಲಾ ಪಂಚಾಯಿತಿಯ ಬಗ್ಗೆ ಉತ್ತರ ಕೊಡಿ, ಆಮೇಲೆ ತಾಲ್ಲೂಕು ಪಂಚಾಯಿತಿಯ ಬಗ್ಗೆ ಪ್ರಶ್ನೆ ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ತರಹದ ಮೀಸಲಾತಿಯನ್ನು ನಾವು ಕಾನೂನಿಗೆ ಅನುಗುಣವಾದ ರೀತಿಯಲ್ಲಿ ಮಾಡುತ್ತಾ ಹೋಗುತ್ತಿದ್ದೇವೆ. ನಾವು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟ ಹಾಗೆ ನಿಯಮ 3(2-ಎ) ಕೆಳಿಗೆ ನಿರ್ಧಾರ ಮಾಡುತ್ತೇವೆ. ಅದಾದನಂತರ ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ನಿಯಮ 3(2-ಎ) ಕೆಳಗೆ ಮಾಡುತ್ತೇವೆ. ಅದಾದಮೇಲೆ ಹಿಂದುಳಿದ ಜನಾಂಗ, ಎ ಮತ್ತು ಬಿ ಗೆ ಸಂಬಂಧಪಟ್ಟ ಹಾಗೆ ನಿಯಮ 3(2-ಬಿ) ಕೆಳಗೆ ಮಾಡುತ್ತೇವೆ. ಈ ರೀತಿಯಾಗಿ ನಾವು ನಿರ್ಣಯ ತೆಗೆದುಕೊಂಡಿರತಕ್ಕಂಥದ್ದು, ಒಂದೇ ಹುದ್ದೆಯನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿರತಕ್ಕಂಥ ಹೆಣ್ಣು ಮಕ್ಕಳು ಹೊಂದಬಾರದು ಎನ್ನತಕ್ಕಂಥ ನಿಯಮವಿದೆ. ಎರಡೂ ಪದವಿಗಳನ್ನು ಎಸ್.ಸಿ. ಮತ್ತು ಎಸ್‌ಟಿ ಅವರು ಹೊಂದಬಾರದು ಎನ್ನತಕ್ಕಂಥದ್ದು ನಿಯಮವಿದೆ. ಈ ನಿಯಮಗಳಿಗನುಸಾರವಾಗಿ ನಾವು ಕೊಟ್ಟಿರತಕ್ಕದ್ದು, ಈಗ ತಾವು ಏನು ಧಾರವಾಡದಲ್ಲಿ ಕೊಟ್ಟಿರತಕ್ಕಂಥದ್ದು ಆಗಲೀ, ಬೆಂಗಳೂರಿನಲ್ಲಿ ಕೊಟ್ಟಿರತಕ್ಕಂಥದ್ದಾಗಲಿ, ಈ ಕ್ಯಾಟಗರಿ ಪ್ರತ್ಯೇಕವಾಗಿರುವುದರಿಂದ ಇಲ್ಲಿ ಗ್ರಾಮಾಂತರದಲ್ಲಿ ಕೊಟ್ಟಿರತಕ್ಕಂಥದ್ದು ನಮ್ಮ ನಿಮಯಕ್ಕೆ ಬಾಹಿರವಾಗಿರತಕ್ಕಂಥದ್ದು ಏನೂ ಇಲ್ಲ. ಇಲ್ಲಿ ಪರಿಶಿಷ್ಟ ಪಂಗಡಕ್ಕೆ ಸಂಬಂಧ ಪಟ್ಟಿರತಕ್ಕಂಥದ್ದು ಅಲ್ಲಿ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ನಿಯಮವನ್ನು

ರಚನೆ ಮಾಡಿ ಅದರ ಪ್ರಕಾರ ನಾವು ಕೊಟ್ಟಿದ್ದೇವೆ. ಉಳಿದಿರತಕ್ಕಂಥದ್ದು ಸರ್ಕಾರ ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ವಿವೇಚನೆ ಮಾಲಕ ನಿಯಮಬಾಹಿರ ರೀತಿಯಲ್ಲಿ ಮಾಡಬಾರದು ಎಂಬುದು. ಅಲ್ಲಿ ಹೋದ ಸಲ ಜನರಲ್ ಇತ್ತು ಈ ಸಾರಿ (ಬಿ) ಬಂದಿದೆ ಅಂದರೆ ಅಲ್ಲಿ ತಪ್ಪಾಗಿರತಕ್ಕಂಥದ್ದು ಏನೂ ಇಲ್ಲ. ಆಮೇಲೆ ಜನರಲ್ ಆಗಿ ಕೊಟ್ಟಿರತಕ್ಕಂಥದ್ದು ಬಳ್ಳಾರಿಯಲ್ಲಿ ವುಮೆನ್ ಇರತಕ್ಕಂಥದ್ದು ಅದು ವರ್ಗವೇ ಬೇರೆ. ಈಗ ಸಾಮಾನ್ಯವಾದ ವರ್ಗ ಕೊಟ್ಟಾಕ್ಷಣ ಆ ವರ್ಗ ಅಲ್ಲಿ ಬದಲಾಗಿರುತ್ತಿದೆ ಇಲ್ಲಿ ಮುಖ್ಯವಾಗಿ ಯೋಚಿಸಬೇಕಾದುದು ಆ ನಿಯಮಗಳಲ್ಲಿ ಯಾವ ಯಾವ ವರ್ಗಗಳಾಗಿರುತ್ತವೆ ಆ ವರ್ಗಗಳಿಗೆ ಯಾರಾದರೂ ಕೂಡ ಸ್ಪರ್ಧಿಸಲಿಕ್ಕೆ ಅವಕಾಶವಿರುವುದಿಲ್ಲ, ಅಂತಹ ಸಂದರ್ಭದಲ್ಲಿ ಎಲ್ಲರೂ ಭಾಗವಹಿಸುವ ಸಾಧ್ಯತೆ ಇರತಕ್ಕಂಥ ಸಾಮಾನ್ಯ ವರ್ಗವನ್ನು ನಾವು ನಿಯಮಗಳ ಪ್ರಕಾರ ಮಾಡಿರತಕ್ಕಂಥದ್ದು ಶೇಕಡ 33 ರಷ್ಟು ಪ್ರಮಾಣದಲ್ಲಿ, ಹಿಂದುಳಿದ ಜಾತಿ ಮತ್ತು ಜನಾಂಗಕ್ಕೆ ನಾವು ಮೀಸಲಾತಿಯನ್ನು ಕೊಡತಕ್ಕಂಥದ್ದು ಶೇಕಡ 33ರಷ್ಟು ಅಥವಾ ಅಯಾಯಾ ಪ್ರದೇಶದ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾದ ರೀತಿಯಲ್ಲಿ ಮೀಸಲಾತಿಯನ್ನು ಕೊಡತಕ್ಕಂಥದ್ದು, ಶೇಕಡ 33ರಷ್ಟು ಮಹಿಳೆಯರಿಗೆ ಕೊಡತಕ್ಕಂಥದ್ದು ಏನು ಇದೆ ಈ ಪ್ರಮಾಣವನ್ನು ಸಂಪೂರ್ಣವಾಗಿ ನಾವು ಕಾಪಾಡಿಕೊಂಡು ಬಂದಿದ್ದೇವೆ. ಆ ಲೆಕ್ಕಚಾರದಲ್ಲಿ ನಾವು ನೋಡುವುದಾದರೆ ತಾಲ್ಲೂಕು ಪಂಚಾಯಿತಿಯಲ್ಲಿ ಶೇಕಡ 40ಕ್ಕೂ ಹೆಚ್ಚು ಮಹಿಳೆಯರಿಗೆ ಸ್ಥಾನ ಸಿಕ್ಕಿದೆ, ಜಿಲ್ಲಾ ಪಂಚಾಯಿತಿಯಲ್ಲಿ ಶೇಕಡ 36ಕ್ಕೂ ಹೆಚ್ಚು ಮಹಿಳೆಯರಿಗೆ ಸ್ಥಾನ ಸಿಕ್ಕಿದೆ, ನಾವು ಯಾವದೇ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಿಯಮಗಳನ್ನು ಉಲ್ಲಂಘನೆ ಮಾಡಿಲ್ಲ ಎಂದು ನೀವು ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ರಿಸರ್ವೇಶನ್‌ನಲ್ಲಿ ವಿಶೇಷವಾಗಿ ಎಸ್‌ಸಿ-ಎಸ್‌ಟಿಗಳಿಗೆ ಪಾಪ್ಯುಲೇಷನ್ ಆಧಾರದ ಮೇಲೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಎರಡನೆಯದಾಗಿ ಬೇರೆ ಕ್ಯಾಟಗರಿಗೂ ಅಲ್ಲಿ ಸ್ಥಳದಲ್ಲಿ ಇರತಕ್ಕಂಥವರನ್ನು ನೋಡಿಕೊಂಡು ಅದನ್ನು ಸರಿ ಮಾಡಿಕೊಳ್ಳಬೇಕೆಂದೂ ಕೂಡ ತಾವು ತಿಳಿಸಿದ್ದೀರಿ. ಅದು ಈ ಪ್ರಶ್ನೆಗೆ ಬರುವುದಿಲ್ಲ, ಏಕೆಂದರೆ ಒಂದು ರೂಲ್ಸ್ ಇದ್ದಮೇಲೆ ಆ ರೂಲ್ಸ್‌ನ ಪ್ರಕಾರ ಎಲ್ಲೆಲ್ಲಿ ಪಾಪ್ಯುಲೇಷನ್ ಎಸ್.ಸಿ, ಜಾಸ್ತಿ ಇದೆ ಅಲ್ಲಿ ಅವರು ಅಧ್ಯಕ್ಷರು ಮಾಡಬೇಕು. ಆ ಸಲ ಆಗಿಲ್ಲ ಅಂದರೆ ರಿಸರ್ವೇಷನ್ ಎಸ್.ಸಿ. ಆಗಿದ್ದರೆ, ನೆಕ್ಸ್ಟ್ ಪಾಪ್ಯುಲೇಷನ್ ಅದಕ್ಕಿಂತ ಕಡಿಮೆ ಇದ್ದರೆ ನೆಕ್ಸ್ಟ್ ಹೈಯಸ್ಟ್ ಯಾವುದು ಬರುತ್ತದೆ ಅದನ್ನು ಮಾಡಬೇಕೆಂಬುದೇ ರೂಲ್ಸ್‌ನಲ್ಲಿರತಕ್ಕಂಥದ್ದು ರಿಸರ್ವೇಷನ್‌ನಲ್ಲಿ ಅದರೆ ಸ್ಥಳೀಯರು ಹೊಂದಾಣಿಕೆ ಮಾಡುಕೊಂಡು ಮಾಡುವ ಪ್ರಶ್ನೆಯೇ ಬರುವುದಿಲ್ಲ. ಅದನ್ನೇ ಕೂಡ ಇಲ್ಲಿಂದ ರೋಸ್ಟರ್ ಪಾಯಿಂಟ್‌ಮಾಡಬೇಕಾಗುತ್ತದೆ. ಅದಕ್ಕಾಗಿ ಹಿಂದೆ 1 ರಿಂದ 100 ಪಾಯಿಂಟ್ ಮಾಡಿ ಫಸ್ಟ್-ಎಸ್‌ಸಿ, ಸೆಕೆಂಡ್-ಎಸ್‌ಟಿ, ಈ ರೀತಿಯಾಗಿ ಮಾಡಿಕೊಂಡು ಬಂದಿದ್ದರು. ಆದರೆ ಇವತ್ತು ತಾವು ಏನು ಮಾಡಿದ್ದೆರೆಂದರೆ ಅದನ್ನು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿದ್ದರೆಂದರೆ ತಾವು ತಪ್ಪಾಗಿ ಭಾವಿಸಬಾರದು. ನಾನು ಏಕೆ ಹೇಳುತ್ತಿದ್ದೇನೆಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಎಸ್‌ಸಿ ಪಾಪ್ಯುಲೇಷನ್ ಹೈಯೆಸ್ಟ್ ಇರತಕ್ಕಂಥದ್ದು

ಮೈಸೂರು ಜಿಲ್ಲೆಯಲ್ಲಿ, ನೆಕ್ಸ್ಟ್ ಗುಲ್ಬರ್ಗಾ, 3ನೇಯದಾಗಿ ಕೋಲಾರ, ಮತ್ತು 4ನೇಯದಾರಿ ಚಿತ್ರದುರ್ಗ. ತಾವು ಸೆನ್ಸಸ್ ಪ್ರಕಾರ ಇರತಕ್ಕ ಅಂಕಿಸಂಖ್ಯೆಯನ್ನು ತರಿಸಿಕೊಂಡು ನೋಡಿ, ಅಂದಾಗ ಗುಲ್ಬರ್ಗಾ ವುಮೆನ್ ರಿಸರ್ವೇಷನ್ ಆಗಿದ್ದರೆ ಈ ಸಾರಿ ಯಾವ ರೀತಿ ಬಳ್ಳಾರಿಗೆ ಜನರಲ್ ವುಮೆನ್ ಬಂದಮೇಲೆ ಜನರಲ್-ಜೆಂಟ್ಸ್ ಬಂದರು ಅದೇ ರೀತಿ ಗುಲ್ಬರ್ಗಾಕ್ಕೆ ಬರಬೇಕಾಗಿತ್ತು. ಗುಲ್ಬರ್ಗಾ ಇಲ್ಲ ಅಂದರೆ ನೆಕ್ಸ್ಟ್ ಹೈಯೆಸ್ಟ್ ಪಾಪ್ಯುಲೇಷನ್ ಇರತಕ್ಕಂಥದ್ದು ಚಿತ್ರದುರ್ಗಕ್ಕೆ ಬರಬೇಕಾಗಿತ್ತು. ಅಲ್ಲಿ ಇಲ್ಲ ಅಂದರೆ ಮೈಸೂರು ಬರಬೇಕಾಗಿತ್ತು. ಏಕೆಂದರೆ ಅವು ಬಂದಮೇಲೆ ಉಳಿದಂತೆ ಕ್ಯಾಟಗರಿ ತೆಗೆದುಕೊಳ್ಳತಕ್ಕಂಥದ್ದು. ಅವರು ಪಾಪ್ಯುಲೇಷನ್ ಆಧಾರದ ಮೇಲೆ ಅಧ್ಯಕ್ಷ, ಉಪಾಧ್ಯಕ್ಷ ಫಿಕ್ಸ್ ಮಾಡಿದ ಮೇಲೆ ಉಳಿದಂತ ಬ್ಯಾಕ್‌ವರ್ಡ್ ಕ್ಲಾಸ್ ಕ್ಯಾಟಗರಿಯಾಗಲಿ, ಜನರಲ್ ಕ್ಯಾಟಗರಿಯಾಗಲಿ ಫಿಕ್ಸ್ ಮಾಡತಕ್ಕಂಥದ್ದು ರೂಲ್ಸ್‌ನಲ್ಲಿ ಇದೆ. ಅಂದರೆ ಇಲ್ಲಿ ಯಾವ ಆಧಾರದ ಮೇಲೆ ಗುಲ್ಬರ್ಗಾದಲ್ಲಿ ಆಗಲಿಲ್ಲ? ಆಮೇಲೆ ಪಾಪ್ಯುಲೇಷನ್ ಪ್ರಕಾರ ಕೋಲಾರ ಆಗಬೇಕು, ಅದೂ ಆಗಲಿಲ್ಲ. ನೆಕ್ಸ್ಟ್ ಚಿತ್ರದುರ್ಗ ಆಗಬೇಕಾಗಿತ್ತು, ಅದೂ ಇಲ್ಲ. ಆಮೇಲೆ ನೀವು ಮಾಡಿದ್ದು ಯಾವುದೆಂದರೆ, ತುಮಕೂರು-ಎಸ್‌ಸಿ-ವುಮೆನ್ ಮಂಡ್ಯ-ಎಸ್‌ಸಿ-ವುಮೆನ್, ಮಂಡ್ಯದಲ್ಲಿ 8 ಕ್ಷೇತ್ರಗಳಲ್ಲಿ ಈ ಒಂದು ರಿಸರ್ವೇಷನ್ ಇದೆ, ಪಾಪ್ಯುಲೇಷನ್ ಕೂಡ 14 ಪರ್ಸೆಂಟ್ ಇದೆ. ಉಳಿದ ಕಡೆ ಸುಮಾರು 23-24-25ರವರೆಗೆ ಪಾಪ್ಯುಲೇಷನ್ ಕೂಡ 14 ಪರ್ಸೆಂಟ್ ಇದೆ. ಅಂದರೆ ಪಾಪ್ಯುಲೇಷನ್ ಆಧಾರದ ಮೇಲೆ ಎಲ್ಲಿ ಮಾಡದ್ದೀರಿ? ತಾವು ಸೆನ್ಸಸ್ ತರಿಸಿ ನೋಡಿ, ಪಾಪ್ಯುಲೇಷನ್ ಆಧಾರದ ಮೇಲೆ ಎಂದು ರೂಲ್ಸ್ ಏನು ಇದೆ ಅದು ಬಿಟ್ಟು ಮಾಡಿದ್ದರೆ ಯಾವ ರೀತಿ ಮಾಡಿದೆ ಎಂಬುದನ್ನು ಸ್ಪಷ್ಟಪಡಿಸಬೇಕು, ತಾವು 1991ರಲ್ಲಿ ಸೆನ್ಸಸ್ ಬುಕನ್ನು ತರಿಸಿ ಅದರಲ್ಲಿ ತಾವು ಆಲ್ಟರ್‌ನೇಟೀವ್ ಆಗಿ ಮಾಡಿ. ಹೋದ ಸಲ ಇದ್ದದ್ದು ಈ ಸಲ ಇರುವುದಿಲ್ಲ ಅದು ನನಗೆ ಗೊತ್ತು. ಆದರೆ ನೆಕ್ಸ್ಟ್ ಹೈಯೆಸ್ಟ್ ಯಾವುದು ಬರುತ್ತದೆ ಅದರ ಪ್ರಕಾರ ಮಾಡಿದ್ದರೆ ತೋರಿಸಿ, ಇಲ್ಲದಿದ್ದರೆ ಅದನ್ನು ತಾವು ಯಾವ ರೀತಿಯಾಗಿ ಮಾರ್ಪಾಡು ಮಾಡುತ್ತೀರಿ ಅಥವಾ ಇದರ ಬಗ್ಗೆ ತಾವು ಏನು ಹೇಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಪ್ರಸ್ತಾಪ ಮಾಡಿದಂತೆ ಜನಸಂಖ್ಯೆಯು ಹೆಚ್ಚು ಪ್ರಮಾಣದಲ್ಲಿರತಕ್ಕಂಥ ತಾಲ್ಲೂಕು ಪಂಚಾಯಿತಿಗಳಲ್ಲಿ ಅಥವಾ ಜಿಲ್ಲಾ ಪಂಚಾಯಿತಿಗಳಲ್ಲಿ ಅದನ್ನು ನಿರ್ಣಯ ಮಾಡಬೇಕೆಂದು ಇದ್ದರೂ ಕೂಡ ಕಾನೂನಿನ ಪ್ರಕಾರ ಪ್ರಾಥಮಿಕವಾಗಿ ಮೀಸಲಾತಿ ನಿರ್ಧಾರ ಮಾಡುವ ಸಂದರ್ಭದಲ್ಲಿ ಶೇಕಡವಾರು ಪ್ರಮಾಣಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ತಾವು ಹೇಳಿದಂತೆ ಮೈಸೂರು ಜಿಲ್ಲೆಯಲ್ಲಿ 5 ಲಕ್ಷ ಪರಿಶಿಷ್ಟ ಪಂಗಡದ ಜನಸಂಖ್ಯೆ ಇದೆ. ಅದು ಪಾಪ್ಯುಲೇಷನ್ ದೃಷ್ಟಿಯಿಂದ ಹೆಚ್ಚು. ಆದರೆ ಇಲ್ಲಿ ಬಂದಿರತಕ್ಕಂಥದ್ದು ಶೇಕಡವಾರು ಪ್ರಮಾಣವನ್ನು ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಕೋಲಾರ ಜಿಲ್ಲೆಗೆ ಹೆಚ್ಚು ಪ್ರಮಾಣ ಬಂತು. ಆ ಕಾರಣಕ್ಕಾಗಿ ಪರಿಶಿಷ್ಟ ಜಾತಿಗೆ ಕೋಲಾರದಲ್ಲಿ ಕೊಟ್ಟಿದ್ದೇವೆ. ಇದರಲ್ಲಿ ನಾವು ಅಂಕಿಸಂಖ್ಯೆಗಳ ವ್ಯತ್ಯಾಸ ಮಾಡಲಿಕ್ಕೆ ಹೋಗಿಲ್ಲ, ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಹೇಳಿದಂತೆ 1991ರ ಜನಗಣತಿ ಪ್ರಕಾರ ನಾವು ನಿರ್ಧಾರ ತೆಗೆದುಕೊಂಡಾಗ ಅಲ್ಲಿ ಶೇಕಡವಾರು ಮಾಡಿರತಕ್ಕಂಥದ್ದು ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶೇಕಡವಾರು ಅಲ್ಲಿ ಬಂದಿಲ್ಲ, ಮಂಡ್ಯ, ಮೈಸೂರು, ಕೋಲಾರ, ಚಿತ್ರದುರ್ಗ, ಇವುಗಳನ್ನು ಹೋಲಿಸಿ ನೋಡಿ.

ಶ್ರೀ ಎಂ.ಪಿ. ಪ್ರಕಾಶ್: ಅಲ್ಲಿ ಶೇಕಡವಾರು ಬರುತ್ತದೆ. ಜನಸಂಖ್ಯೆಯ ಆಧಾರ ತೆಗೆದುಕೊಂಡಲ್ಲಿ ಬಂದಿರತಕ್ಕಂಥ 4 ಜಿಲ್ಲೆಗಳಂತೆ ಉಳಿದಂಥ ಜಿಲ್ಲೆಗಳನ್ನು ತೆಗೆದುಕೊಂಡಿದ್ದೇವೆ. ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ಚಿತ್ರದುರ್ಗ ಮತ್ತು ಬಳ್ಳಾರಿ ನಂತರ ಕೊಡಗು ಮತ್ತು ರಾಯಚೂರನ್ನು ತೆಗೆದುಕೊಂಡಿದ್ದೇವೆ. ಈ ರೀತಿಯಾಗಿ ತೆಗೆದುಕೊಂಡಿದ್ದು ಶೇಕಡವಾರು ಇರುವುದರಿಂದ ಸ್ವಲ್ಪ ತಮಗೆ ಅದು ಅಸ್ಪಷ್ಟತೆ ಕಂಡಂತೆ ಆಗಿರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಸ್ಪಷ್ಟತೆ ಏನೂ ಇಲ್ಲ, ನಿಮಗೆ ಎಲ್ಲಿ ಬೇಕು ಅಲ್ಲಿ ಅನುಕೂಲ ಸಿಂಧೂ ಮಾಡಿಕೊಂಡಿದ್ದೀರಿ, ಅದರ ಪ್ರಕಾರ ಬಂದರೆ ಶೇಕಡವಾರು ಬರುತ್ತದೆ, ಪಾಪ್ಯುಲೇಷನ್ ವೈಸ್ ಕೂಡ ಬರುತ್ತದೆ. ನಿಮಗೆ ಬೇಕಾದವರು ಇಲ್ಲ ಎಂದು ಹೇಳಿ ಎಲೆಕ್ಷನ್ ಪೋಸ್ಟ್‌ಪೋನ್ ಮಾಡಿದ್ದೀರಿ, ನಿಮ್ಮ ಅನುಕೂಲಕ್ಕಾಗಿ ನೀವು ಎಲ್ಲಾ ಗಲಾಟೆ ಮಾಡಿಕೊಂಡು ನಿಮಗೆ ಬೇಕಾದಂಥವರು ಅಧ್ಯಕ್ಷರಾಗಿಲ್ಲವೆಂದು ಹೇಳಿ ಮಾಡಿದ್ದುದು.

ಶ್ರೀ ಸಿದ್ಧರಾಮಯ್ಯ : ಸದನ ನಡೆಯುತ್ತಿರುವ ಸಂದರ್ಭದಲ್ಲಿ ನಮಗೆ ಬೇರೆ ಯಾವುದೇ ಉದ್ದೇಶ ಇಲ್ಲ, ಯಾವುದೇ ರಾಜಕೀಯ ಇಲ್ಲ. ಕೊಡಗಿನಲ್ಲಿ ನಮ್ಮ ಅಭ್ಯರ್ಥಿ ಇಲ್ಲ, ಅಂದಾಗ ಅನುಕೂಲ ಸಿಂಧು ಎಲ್ಲಿ ಬರುತ್ತದೆ? ಅಲ್ಲಿ ಕಾಂಗ್ರೆಸ್‌ನವರಿಗೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾಂಗ್ರೆಸ್, ಕಮ್ಯುನಿಸ್ಟ್, ಜನತಾದಳ ಎಂದು ನಾನು ಹೇಳುತ್ತಿಲ್ಲ, ನೀವು ಸೆನ್ಸಸ್ ಪ್ರಕಾರ ಪಾಪ್ಯುಲೇಷನ್ ಆಧಾರ ಮೇಲೆ ಮಾಡಿದ್ದೇವೆಂದು ಹೇಳಿದಿರಿ, ಅದು ಸರಿಯೇ ತಪ್ಪೇ ಎಂಬುದಕ್ಕೆ ನೀವು ಬೇಕಾದರೆ ಅದನ್ನು ತರಿಸಿ ನೋಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು. ಇದರಲ್ಲಿ ಬಹಳ ಅನುಮಾನವಿದೆ. ಇದನ್ನು ಕೆಲವೇ ಜನರು ಕುಳಿತುಕೊಂಡು ಈ ಮೀಸಲಾತಿಯನ್ನು ಮಾಡಿದ್ದಾರೆ. ಇದಕ್ಕೆ ಯಾವುದೇ ಸೂತ್ರವನ್ನಾಗಲಿ, ನೀತಿ ನಿಯಮಗಳನ್ನಾಗಲೀ ಎಲ್ಲವನ್ನೂ ಅವರು ಗಾಳಿಗೆ ತೂರಿ ತಮ್ಮ ಇಚ್ಛೆಗೆ ಬಂದಹಾಗೆ ಮಾಡಿದ್ದಾರೆ. ಇದರಲ್ಲಿ ಏನೂ ಅನುಮಾನವಿಲ್ಲ. ಅದುದರಿಂದ ಈ ಬಗ್ಗೆ ಸಮಗ್ರವಾಗಿ ತನಿಖೆಯಾಗುವುದಕ್ಕೆ ದಯಮಾಡಿ ಅರ್ಧ ಗಂಟೆ ಕಾಲಾವಧಿಯ ಚರ್ಚೆಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಅನ್ಯಾಯವಾಗಿದೆ. ಇದನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಅದುದರಿಂದ ದಯಮಾಡಿ ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮೀಸಲಾತಿಯಲ್ಲಿ ಯಾರಿಗೆ ಅನ್ವಯವಾಗುತ್ತದೆಯೋ, ಬಹುಮತವಿದೆಯೋ ಅವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಲಿ, ಆದರೆ

ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ತಮಗೆ ಖುಷಿ ಬಂದಂತೆ ಮಾಡುತ್ತಿದ್ದಾರೆ, ಮಾಡಲಿ ಎಲ್ಲವನ್ನು ಜನರು ನೋಡುತ್ತಿದ್ದಾರೆ. ಆದರೆ ನನಗೆ ದುಃಖವಾಗುತ್ತಿರುವಂಥಾದ್ದು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ದಿನಾಂಕವನ್ನು ಫಿಕ್ಸ್ ಮಾಡಿದ್ದು ನಂತರ ಅದನ್ನು ಮುಂದೂಡಿರುವುದರಿಂದ ಇವತ್ತು ವರ್ಷದ ಕೊನೆಯಲ್ಲಿ ಹಣ ಖರ್ಚು ಆಗದೇ ಚೀಫ್ ಸೆಕ್ರೆಟರಿ ಖರ್ಚು ಮಾಡುವುದಕ್ಕೆ ಬರದೆ ಲೂಟಿ, ಅವ್ಯವಹಾರ, ಆಗುತ್ತಿದೆ. ತಾವು ಇದನ್ನು ಏನಾದರೂ ಗಮನಿಸಿದ್ದೀರೋ? ನೀವು ರಾಜಕಾರಣ ಮಾಡುತ್ತೀರಾ ಮಾಡಿ ಆದರೆ ಅಭಿವೃದ್ಧಿ ಕೆಲಸ ಕಾರ್ಯಗಳು ನಿಮ್ಮ ಸ್ವಾರ್ಥಕ್ಕೋಸ್ಕರ, ನಿಮ್ಮ ಸ್ವತಃ ಬಡಿದಾಟಕ್ಕೋಸ್ಕರ ಕುಂಠಿತವಾಗುತ್ತಿದೆ. ಇದಕ್ಕೆ ಯಾರು ಉತ್ತರ ಕೊಡಬೇಕು? ಕ್ಯಾಲೆಂಡರ್ ಆಫ್ ಇವೆಂಟ್ಸ್ ಆಗಿ ಅದನ್ನು ಮುಂದಕ್ಕೆ ಹಾಕುವುದಕ್ಕೆ ಏಕೆ ಹೇಳಿದ್ದೀರಿ? ಯಾವ ಶಾಸಕರು ಮುಂದಕ್ಕೆ ಹಾಕಬೇಕೆಂದು ಹೇಳಿದರು? ನಿಮ್ಮ ಅನುಕೂಲ ಸಿಂಧುಗೋಸ್ಕರ ರಾಜಕಾರಣ ಮಾಡಿಕೊಳ್ಳುವುದಕೋಸ್ಕರ ಜನರ ಜೊತೆಯಲ್ಲಿ ಏಕೆ ಚೆಲ್ಲಾಟ ನಡೆಸುತ್ತೀರಿ? ಇದು ನಮಗೆ ಬಹಳ ದುಃಖ ತರುವಂಥ ವಿಷಯವಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಇದಕ್ಕೆ ಉತ್ತರವನ್ನು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ಮಾಜಿ ನಾಯಕರು ಬೇಕಾದರೆ ನಾವು ಜನಸಂಖ್ಯಾ ಆಧಾರದ ಮೇಲೆ ಮಾಡಿದ್ದೆವೆಯೇ ಇಲ್ಲವೆ ಎನ್ನುವುದನ್ನು ವೆರಿಫೈ ಮಾಡುವುದಕ್ಕೆ ಏನ್ನೂ ಕಷ್ಟವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅದನ್ನು ಅಬ್ಜೆಕ್ಷನ್ ಮಾಡುತ್ತಿಲ್ಲ. ತಾವು ಏಕೆ ಆ ಚುನಾವಣೆಗಳನ್ನು ಮುಂಡೂಡಬೇಕಾಗಿತ್ತೆಂದು ನಾವು ಕೇಳುತ್ತಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್: ನಾವು ಸದನ ಇದೆ ಎಂಬ ಕಾರಣಕ್ಕೋಸ್ಕರ ಮುಂದೂಡಬೇಕಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಸದನ ಇರುವುದು ಗೊತ್ತಿರಲಿಲ್ಲವೇ? ನೀವೇ ಬಜೆಟ್ ಅಧಿವೇಶನವನ್ನು ಕರೆದಿದ್ದೀರಿ, ಅದು ನಿಮಗೆ ಗೊತ್ತಿಲ್ಲವೇ? ಅಂದರೆ ನಿಮಗೆ ಪುರುಸೊತ್ತಿಲ್ಲ. ಯಾರೋ ಅಧಿಕಾರಿ ಕ್ಯಾಲಂಡರ್ ....

ಶ್ರೀ ಜೆ. ಹೆಚ್. ಪಟೇಲ್: ತಾವು ಕೋಪ ಮಾಡಿಕೊಳ್ಳದಿದ್ದರೆ ಒಂದು ಮಾತನ್ನು ಕೇಳುತ್ತೇನೆ. ನೀವು ಎಷ್ಟು ಡಿಸ್ಟ್ರಕ್ಷನಲ್ಲಿದ್ದೀರಿ? ನಾವು ನಿಮ್ಮನ್ನು ತೆಗೆಯುವುದಕ್ಕೋಸ್ಕರ ಏನಾದರೂ ಹಾಗೆ ಮಾಡಿದ್ದೆವೆಯೇ? Be honest to yourself. ಇವರು ಎಲ್ಲೋ ಒಂದೆರಡು ಡಿಸ್ಟ್ರಿಕ್ಟ್‌ಗಳನ್ನು ಇಟ್ಟುಕೊಂಡು ನಮಗೆ ಹೇಳುತ್ತಾರೆ. ಇವರ ಅನುಕೂಲಕ್ಕೋಸ್ಕರ ಎಂದು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ಜಿಲ್ಲೆಯಲ್ಲಿದ್ದೇವೆಂಬ ಪ್ರಶ್ನೆಯಲ್ಲ. (ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದೆಹಲಿಯಲ್ಲಿ ಪ್ರಧಾನಿ ಸ್ಥಾನ ಸಿಕ್ಕಿದೆ ಎಂದು..... ಈ ದೇಶಕ್ಕೆ ನೀವು ಎಲ್ಲಿ ಇದ್ದೀರಿ? ಅಡ್ರಸ್ಸ್ ಇಲ್ಲ. ಪಂಜಾಬ್‌ನಲ್ಲಿ ಒಂದು ಸೀಟೂ ಇಲ್ಲ. ದೆಹಲಿಯಲ್ಲಿ ಅಡ್ರಸ್ಸ್

ಇಲ್ಲ. ಬೊಂಬಾಯಿಯಲ್ಲಿ ಕೇಳುವವರೇ ಇಲ್ಲ. ಈಗ ನೀವು ನಮ್ಮನ್ನೇ ಕೇಳುತ್ತಿರಲ್ಲಾ, ನೀವು ಹೇಗೆಯೇ ಆಡಳಿತ ನಡೆಸಿ, ನಿಮ್ಮನ್ನು ಜನರು ಮನೆಗೆ ಕಳುಹಿಸುತ್ತಾರೆ. ನಮ್ಮನ್ನು ಅಧಿಕಾರಕ್ಕೆ ತರುವವರು ಇದ್ದಾರೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ಈಗ ಪ್ರಸ್ತಾಪ ಮಾಡುತ್ತಿರುವಂಥ ವಿಚಾರ ಸ್ವಾರಸ್ಯಕರವಾಗಿದೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಒಟ್ಟು ಇಪ್ಪತ್ತು ಜಿಲ್ಲೆಗಳಲ್ಲಿ ಹತ್ತೊಂಭತ್ತು ಜಿಲ್ಲೆಗಳಲ್ಲಿ ಜನತಾ ದಳವಿದೆ, ನಮ್ಮ ಬೆಂಬಲದಿಂದ ಈ ಮಹಾಶಯ ಮಂಗಳೂರಿನಲ್ಲಿ ಇದ್ದರು.

ಅಧ್ಯಕ್ಷರು : ಅದು ಏನೇ ಇರಲಿ, ನಾನು ಅಶಾಜೀವಿಗಳ ಪರ. ನಾನು ಯಡಿಯೂರಪ್ಪನವರ ಪರ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ನಮ್ಮ ಪಕ್ಷದವರು ಅಲ್ಲಿ ಬರುತ್ತಾರೆ, ಇಲ್ಲಿ ಬರುತ್ತಾರೆನ್ನುವಂಥಾದ್ದು, ಹೇಳಲಿಲ್ಲ. ನಾನು ಕೇಳಿದ್ದು ಏನೆಂದರೆ ಷೆಡ್ಯೂಲ್ಡ್ ಕಾಸ್ಟ್ ಜನರು ಎಲ್ಲಿ ಜಾಸ್ತಿ ಇದ್ದಾರೆ, ಅಂತಹ ಕಡೆಗಳಲ್ಲಿ ರಿಜರ್ವೇಷನ್ ಬಿಟ್ಟು, ಬೇರೆ ಕಡೆ ನೀವು ಮಾಡಿದ್ದೀರಿ ಎನ್ನುವಂತಹ ವಾದವನ್ನು ನಾನು ಮಾಡಿದ್ದು. ಈ ಜನರು ಇರುವಂಥಾದ್ದು ಗುಲ್ಬರ್ಗಾ, ಕೋಲಾರ, ಮೈಸೂರು, ಚಿತ್ರದುರ್ಗಗಳಲ್ಲಿ. These are major districts with high population according to 1991 census.

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಅವರರಿಗೆ ಏನು ಅಸ್ಪಷ್ಟತೆ, ಗೊಂದಲ ಇದೆಯೋ ಅಥವಾ ತಾವೇ ಏನನಾದರೂ ತಪ್ಪು ಮಾಡಿದ್ದೀರೋ ಎನ್ನುವ ಅನುಮಾನವಿದೆಯೋ ಎನ್ನುವ ಬಗ್ಗೆ ಸವಿವರವಾಗಿ ಚರ್ಚೆ ಮಾಡುವುದಕ್ಕೆ ಬೇರೆ ಸಮಯವನ್ನು ನಿಗದಿ ಮಾಡಿಕೊಳ್ಳೋಣ. ಈಗ ಬಹಳ ಸಮಯ ತೆಗೆದುಕೊಂಡಿದ್ದೇವೆ. ನಾನು ತಮ್ಮೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ಇದಕ್ಕಾಗಿ ಅರ್ಧ ಗಂಟೆ ಕಾಲಾವಧಿ ಚರ್ಚೆ ಮಾಡಲು ಸಮಯವನ್ನು ಮೀಸಲು ಇಡುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ನನಗೆ ಏನು ಆಶ್ಚರ್ಯವಾಯಿತೆಂದರೆ ಮಾನ್ಯ ಮುಖ್ಯ ಮಂತ್ರಿಯವರು ಯಾವುದಾದರೂ ತಪ್ಪು ಇದ್ದರೆ ಸರಿಪಡಿಸೋಣವೆಂದು ಹೇಳುವಂತಹ ಸ್ವಭಾವದವರಾಗಿದ್ದಾರೆ. ಆದರೆ ಇವತ್ತು ಏಕೋ ವಿರುದ್ಧ ದಿಕ್ಕಿನಲ್ಲಿ ಹೋಗಿ ಬಿಟ್ಟರಲ್ಲಾ, ಇದು ಸರಿ ಇಲ್ಲದಿದ್ದರೆ, ಸರಿ ಮಾಡೋಣವೆಂದು ಹೇಳಿ, ಅದರಲ್ಲಿ ತಪ್ಪು ಏನಿದೆ.

ಶ್ರೀ ಜೆ.ಹೆಚ್. ಪಟೇಲ್: ನಾವು ಪಾಪ್ಯುಲೇಷನ್ ಮಾನಿಪ್ಯುಲೇಟ್ ಮಾಡಿಲ್ಲ, ಅಥವಾ ಷೆಡ್ಯೂಲ್ಡ್ ಕಾಸ್ಟ್ ಜನರು ಇರುವ ಕಡೆಗಳಲ್ಲಿ ನಾವೇನು ಅಂಕಿಅಂಶಗಳನ್ನು ತಿದ್ದುವುದಕ್ಕೆ ಆಗುತ್ತದೆಯೆ?

MR.SPEAKER : We will take it up separately for half an hour discussion.